ನಾನು ನಾಲ್ಕು, ಐದನೇ ವರ್ಗದಲ್ಲಿ ಓದುತ್ತಿದ್ದೆ. ಅಪ್ಪ ಶಾಲೆಯ ಮುಂದೆ ಹಾದುಹೋದ ರಸ್ತೆಯ ಅಂಚಿಗಿದ್ದ ಆಕಾಶಮಲ್ಲಿಗೆ ಗಿಡದ ಕೆಳಗೆ ಕುಳಿತು ಕಲ್ಲು ಕಟೆಯುತ್ತಿದ್ದ. ಆ ದಾರಿಯಲ್ಲಿ ಹಾದುಹೋಗುವ ಹೆಚ್ಚು ಓದಿದ ಯುವಕರನ್ನು ನೋಡಿ, 'ನನ್ನ ಮಗ ನಿಮ್ಮಂತೆ ಎಂದು ಆಗುವನು?' ಎಂದು ಹಲುಬುತ್ತಿದ್ದ. ಹೂವಿನ ವಾಸನೆಯಲ್ಲಿ ಅಪ್ಪನ ಮಾತು ಬೇರೊಂದು ವಾಸನೆ ಗ್ರಹಿಸುತ್ತಿತ್ತೇನೋ? ಬಾಲ್ಯವೆಂದರೆ ಹಾಗೆ ಅಲ್ಲವೇ? ಅದರ ಫಲ ಅಪ್ಪ ಇದ್ದಾಗಲೇ ಅವನ ಕನಸು ನನಸು ಮಾಡಿದ ತೃಪ್ತಿ ನನ್ನದು. ಆಗ ನಮ್ಮ ಶಾಲೆಗೆ ಹೊಸ ಮೇಷ್ಟ್ರು ಬಂದರು. ನೋಡಲು ಕೆಂಪು ಕೆಂಪಾಗಿದ್ದರು. ಆ ಮೇಷ್ಟ್ರು ನನ್ನನ್ನು ನೋಡಿದಾಗೊಮ್ಮೆ, 'ಏ ಕರಿಯ ಬಾ, ಏ ಕರಿಯ ಹೋಗು, ಒಡ್ಡ, ಶತ ದಡ್ಡ' ಎನ್ನುತ್ತಿದ್ದರು. ಬಣ್ಣ ಸೂಚಕ, ಜಾತಿ ಸೂಚಕ ಪದಗಳು ಆಗ ಅವಮಾನಗೊಳಿಸಿದರೆ ಇಂದು ಕಾಡಿ ಕಾಡಿ ಕವಿತೆಗಳಾಗಿವೆ. ಕಾಡುವಿಕೆಯೇ ಕಟ್ಟುವಿಕೆಗೆ ಮೂಲ ಪ್ರೇರಣೆ ಅಲ್ಲವೇ?

ಒಂದು ಹಂತದ ಶಿಕ್ಷಣ ಮುಗಿಸಿದೆ. ಕಾಲಲ್ಲಿ ಚಪ್ಪಲಿ ಇಲ್ಲ. ತೊಟ್ಟುಕೊಳ್ಳಲು ಸರಿಯಾದ ಬಟ್ಟೆ ಇಲ್ಲ. ಕೂಳಿನ ತಾಪತ್ರಯ ಬೇರೆ. ಹೆತ್ತವರು ಮುಂದೆ ಕಲಿಸುವುದು ಸಾಧ್ಯವಿಲ್ಲವೆಂದಾಗ ಅಕ್ಕನ ಮನೆಗೆ ಹೋದೆ. ಅಕ್ಕನ ಗಂಡ ಭಯಂಕರ ಕುಡುಕ. ಅವನ ಬಾಯಿಂದ ಬರುವ ಮಾತುಗಳು ಸೊಂಟದ ಕೆಳಗಿನವೇ. ಕುಡಿತದ ಅಮಲಿನಲ್ಲಿ ಅಕ್ಕನನ್ನೂ, ನನ್ನನ್ನೂ ತನಗೆ ತಿಳಿದ ಹಾಗೆ ಹೊಡೆಯುತ್ತಿದ್ದ, ಕೂದಲು ಹಿಡಿದು ದರ ದರನೇ ಎಳೆದು ರಸ್ತೆಗೆ ನುಗಿಸುತ್ತಿದ್ದ. ಆಗೆಲ್ಲ ಯಮ ಯಾತನೆ. ಓದುವುದು ಬೇಡವೆನಿಸುತ್ತಿತ್ತು. ಆಗ ಗೆಳೆಯರು ಆಸರೆಯಾಗಿ ಬಂದರು. ಗೆಳೆಯರಾದ ಶಿವಾನಂದ ಬಟ್ಟೆ ಹೊಲಿಸಿಕೊಟ್ಟರೆ, ಮೌಲಾ ಪಾನ್ ಶಾಪ್ ಇಟ್ಟುಕೊಟ್ಟಿದ್ದಲ್ಲದೇ ಶಾಲೆಯ ಫೀಯನ್ನೂ ಕೊಟ್ಟ, ವಿಠ್ಠಲ ತನ್ನ ಬುತ್ತಿಯಲ್ಲಿ ಊಟ ಹಾಕಿದ, ಸಿದ್ದರಾಮ ತನ್ನ ಹಾಸಿಗೆಯಲ್ಲಿ ಮಲಗಿಸಿಕೊಂಡ. ಅವರಿವರು ಕೊಟ್ಟ ಹರಿದ ಬಟ್ಟೆಗಳನ್ನೆ ತೇಪೆ ಹಚ್ಚಿ ಹಾಕಿಕೊಂಡದ್ದುಂಟು. ಡಿ.ಎಸ್. ಕಣವಿ ಶಿಕ್ಷಕರಂತೂ ತಮ್ಮ ಮನೆಯಲ್ಲಿಟ್ಟುಕೊಂಡು ಓದಿಗೆ ನೆರವಾದರು. ಇಲ್ಲಿ ಯಾವ ಜಾತಿಗಳೂ ಧರ್ಮಗಳೂ ಅಡ್ಡ ಬರಲಿಲ್ಲ.

ಪದವಿ ಓದುವಾಗಿನ ಒಂದು ಘಟನೆ ನೆನಪಾಗುತ್ತಲೇ ಇದೆ. ಊಟಕ್ಕೆ ಬಟ್ಟೆಗೆ ತಾಪತ್ರಯವಂತೂ ಇತ್ತು ಎನ್ನಿ. ಆದರೆ ಹೇಗೋ ಹಾಸ್ಟೆಲಿಗೆ ಸೇರಿದೆ. ಕಾಲೇಜಿನ ಸಿಪಾಯಿಯೊಬ್ಬ ಮೆಸ್ ನಡೆಸುತ್ತಿದ್ದ. ನಮಗೆ ಸರಕಾರದಿಂದ ಬರುವ ಶಿಷ್ಯವೇತನದಲ್ಲಿ ಊಟ ದೊರೆಯುವಂತಾದರೂ ಶಿಷ್ಯವೇತನ ಬೇಗ ಬರುತ್ತಿರಲಿಲ್ಲ. ಒಂದು ದಿನ ರಾತ್ರಿ ಊಟಕ್ಕೆ ಕುಳಿತೆ. ತಾಟಿನಲ್ಲಿಯ ತುತ್ತನ್ನು ಇನ್ನೇನು ಬಾಯಲ್ಲಿ ಇಟ್ಟುಕೊಳ್ಳುವುದರಲ್ಲಿದ್ದೆ. ಮೆಸ್ಸಿನ ಮಾಲೀಕ ಬಂದವನೇ ಸರ್ರನೇ ತಾಟು ಕಿತ್ತುಕೊಂಡ. ಅಲ್ಲಿದ್ದವರೆಲ್ಲರೂ ಮೂಕರಾದರು. ಎದ್ದವನೇ ಹಾಸಿಗೆ ದಿಂಬು ಇರದ ಹಾಸ್ಟೆಲಿನಲ್ಲಿ ಎರಡು ದಿನ ಅತ್ತೆ. ಯಾರು ಕೇಳಬೇಕು ನನ್ನ ನೋವು. ಇವು ಕೆಲವೇ ಕೆಲವು ಉದಾಹರಣೆಗಳು ಮಾತ್ರ.

ಅಂತೂ ಶಿಕ್ಷಣ ಮುಗಿಸಿ, ಖಾಸಗಿ ಶಿಕ್ಷಣ ಸಂಸ್ಥೆಯೊಂದರಲ್ಲಿ ಅಧ್ಯಾಪಕನಾದೆ. ಅಲ್ಲಿ ಸಂಬಳವಿರಲಿಲ್ಲ. ಅದು ಅನುದಾನಕ್ಕೊಳಪಡದ ಸಂಸ್ಥೆ. ಹೇಗೋ ಸರಕಾರಿ ಹಾಸ್ಟೆಲುಗಳಲ್ಲಿ ಸಂಜೆ ಪಾಠ ಮಾಡಿ ತಂದೆ ತಾಯಿಗೆ ನೂರು ರೂಪಾಯಿ ಕಳುಹಿಸುತ್ತಿದ್ದೆ. ನೂರು ರೂಪಾಯಿಯಲ್ಲಿ ನಾನು ಬದುಕುತ್ತಿದ್ದೆ. ನಾನು ಸೇವೆ ಸಲ್ಲಿಸುತ್ತಿದ್ದ ಶಿಕ್ಷಣ ಸಂಸ್ಥೆ ಮುಂದೆ ಅನುದಾನಕ್ಕೊಳಪಟ್ಟಿತು. ಆದರೆ ನನಗೆ ಪದೋನ್ನತಿ ಸಿಗಲಿಲ್ಲ. ಕಾರಣ, ನಾನು ಆ ಸಂಸ್ಥೆಯವರ ಜಾತಿಯವನಾಗಿರಲಿಲ್ಲ.

◆ ನಿಮ್ಮ ಅಡ್ಡಹೆಸರು ಪಾತ್ರೋಟ ಮರಾಠಿ ಶಬ್ದ. ಇದು ಹೇಗೆ ಬಂತು?

ಹೌದು, ಅದೂ ಮರಾಠಿ ಶಬ್ದವೆ. ಪತ್ತರಘೋಡ – ಪಾತ್ರೋಟ ಅಂದರೆ ಕಲ್ಲನ್ನು ಒಡೆದು ಮನೆಕಟ್ಟುವವರಿಗೆ ಪಾತ್ರೋಟ ಎಂಬ ಹೆಸರು ಬಂದಿರಲೂಬಹುದು.